1	2	3	4	5	6	7
76.	ಅಡ್ವಾನ್ಸ್ ಲೈಟಿಂಗ್ ಕಂಪನಿ ಲಿ, ತಾಂಡವಪುರ ನಂಜನಗೂಡು ತಾ:	55	0	55	100	
77.	ಬಜೇಕ ಪೇಪರ್ ಮಿಲ್ಸ್ ನಂಜನಗೂಡು ಕೈ ಪ್ರದೇಶ, ನಂಜನಗೂಡು	625	50	675	63	
78.	ಬರ್ಕಾಡಿ ಮಾರ್ಟಿನ್ ಪ್ರೈಲಿ., ಜೆಮಿನಿ, ನಂಜನಗೂಡು	75	5	80	94	
79.	ಕರ್ನಾಟಕ ಸೋಪ್ಸ್ ಮತ್ತು ಡಿಟರ್ಜೆಂಟ್ಸ್ ಲಿ, ಅಶೋಕಪುರ, ಮೈಸೂರು.	86	0	86	100	
		20710	1869	22579		

ಮೈಸೂರಿನಲ್ಲಿರುವ ಪಶುವೈದ್ಯ ಆಸ್ಪತ್ರೆಗಳು

274 (275): ಶ್ರೀ ಶಂಕರಲಿಂಗೇಗೌಡ ಹೆಚ್.ಎಸ್. (ಚಾಮರಾಜ ಕ್ಷೇತ್ರ) ಮಾನ್ಯ ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮೈಸೂರಿನಲ್ಲಿರುವ ಪಶುವೈದ್ಯ ಆಸ್ಪತ್ರೆಗಳೆಷ್ಟು; ವಿವರ ನೀಡುವುದು;

ಆ) ಸದರಿ ಆಸ್ಪತ್ರೆಗಳ ಪೈಕಿ ಸ್ವಂತ ಕಟ್ಟಡ ಹೊಂದಿಲ್ಲದ ಆಸ್ಪತ್ರೆಗಳು ಯಾವುವು;

ಇ) ಸ್ವಂತ ಕಟ್ಟಡ ಹೊಂದಿಲ್ಲದ ಸದರಿ ಆಸ್ಪತ್ರೆಗಳಿಗೆ ಸ್ವಂತ ಕಟ್ಟಡ ಒದಗಿಸುವ ಸಲುವಾಗಿ ಇದುವರೆಗೆ ಯಾವ ಯಾವ ಕ್ರಮ ಕೈಗೊಳ್ಳಲಾಗಿದೆ; ಕೈಗೊಂಡ ಕ್ರಮದ ಫಲಿತಾಂಶವೇನು?

ಶ್ರೀ ಎಂ. ಮಹಾದೇವ್ (ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು) :

ಅ) ಮೈಸೂರಿನಲ್ಲಿ ಒಟ್ಟು 5 ಪಶು ಆಸ್ಪತ್ರೆಗಳಿವೆ.

ಪಶುವೈದ್ಯ ಆಸ್ಪತ್ರೆಗಳ ವಿವರ

1. ನಗರ ಪಶು ಆಸ್ಪತ್ರೆ
2. ಚಾಮುಂಡಿಪುರಂ
3. ಕುಂಬಾರಕೊಪ್ಪಲು
4. ರಾಜೇಂದ್ರನಗರ
5. ಕನ್ನೇಗೌಡನ ಕೊಪ್ಪಲು

ಆ) ಪಶು ಆಸ್ಪತ್ರೆ, ಕನ್ನೇಗೌಡನ ಕೊಪ್ಪಲು ಗೆ ಸ್ವಂತ ಕಟ್ಟಡ ಇರುವುದಿಲ್ಲ.

ಇ) ಪಶುಆಸ್ಪತ್ರೆ, ಕನ್ನೇಗೌಡ ಕೊಪ್ಪಲು ಗೆ ನಿವೇಶನ ನೀಡಲು ಮೈಸೂರು ಮಹಾನಗರ ಪಾಲಿಕೆಯನ್ನು ಕೋರಲಾಗಿದೆ.

ರಾಜ್ಯದಲ್ಲಿ ಕಲ್ಲುಗಣಿಗಳಿಂದ ಬರುವ ಆದಾಯ

275 (581): ಶ್ರೀ ಸಿಂಧ್ಯ ಪಿ.ಜಿ.ಆರ್. (ಕನಕಪುರ) ಮಾನ್ಯ ಗಣಿ ಮತ್ತು ಭೂವಿಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗೆ ಉತ್ತರಿಸುವರೆ?